ಪ್ರತಿಬಿಂಬ ಲೋಕವೊಂದು ನನ್ನೊಳಗೆ ನಡೆಯುತ್ತಲೇ ಇರುತ್ತದೆ. ರಂಗಭೂಮಿ ಕೂಡ ನನ್ನ ಪಾಲಿಗೆ ಇದೇ ರೀತಿ ಒದಗಿ ಬಂದಿದೆ. ರಂಗ ನಿರ್ದೇಶಕ ಸಿಜಿಕೆ ನನಗೆ ಏನೋ ಹೇಳಿದರು. ನನ್ನೊಳಗೂ ಒಂದು ಒತ್ತಡ ಸೃಷ್ಟಿಯಾಗಿ ನಾಟಕಗಳನ್ನ ಬರೆದೆ. ನನ್ನ ಜೊತೆ ಬರೀತಾ ಇದ್ದ ನಾಟಕಕಾರನ್ನು ನಾನು ಅಷ್ಟು ಗಂಭೀರವಾಗಿ ಸ್ವೀಕರಿಸಲಿಲ್ಲ. ನನಗೆ ಸವಾಲಾಗಿದ್ದು ಕಾಳಿದಾಸ, ಭಾಸ, ಶೂದ್ರಕ, ಭವಭೂತಿ, ಸೋಫೊಕ್ಲಿಸ್, ಶೇಕ್ಸ್‌ಪಿಯರ್, ಸ್ಟ್ರಿಂಡ್‌ಬರ್ಗ್ ಇವರೇ ಹೊರತು ನನ್ನ ಸಮಕಾಲೀನರಲ್ಲ. ನನ್ನ ಕಾಲದ ಅನೇಕರು ತುಂಬಾ ಮಿತಪ್ರಭಾವಗಳಿಂದ ಬರವಣಿಗೆ ಮಾಡ್ತಿದ್ರು. ತಮ್ಮ ಅಲ್ಪ ತಿಳಿವಳಿಕೆಯನ್ನು ಕಸಬುದಾರಿಕೆಯಿಂದ ನಿಲ್ಲಿಸುವ ಪ್ರಯತ್ನ ಮಾಡ್ತಾ ಇದ್ರು. ಅವರ ಓದು ಕೂಡ ಸೀಮಿತವಾಗಿತ್ತು. ಚಂಪಾ ಹೇಳಿದ್ರು, 'ತಲೆದಂಡದಲ್ಲಿ ಸದ್ದಿದೆ, ಮಹಾಚೈತ್ರದಲ್ಲಿ ನಾದವಿದೆ' ಅಂತ. ಕನ್ನಡ ನಾಟಕಗಳನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕು ಅಂತ ಅನ್ನಿಸ್ಲೇ ಇಲ್ಲ ನನಗೆ. ನಾನು ಹಿಮಾಲಯ ಪರ್ವತ ನೋಡ್ದೋನು, ನನಗೆ ಯಾವುದೋ ಒಂದು ಗುಡ್ಡ ನೋಡಿದಂತೆ ಅನ್ನಿಸ್ತಿತ್ತು ಈ ಕನ್ನಡದ ನಾಟಕಗಳನ್ನ ಓದಿದಾಗ. ಕನ್ನಡದ ಸಂದರ್ಭದಲ್ಲಿ ಇವು ಮಹತ್ವದ ಕೃತಿಗಳಾಗಿರಬಹುದು. ಆದ್ರೆ ನನ್ನದು ಕೇವಲ ಕನ್ನಡದ ಸಂದರ್ಭ ಅಲ್ಲ. ನನ್ನ ಸಂದರ್ಭ ಇಡೀ ಭಾರತದ್ದು, ವಿಶ್ವದ್ದು. ನನ್ನ ಓದುಗ ಕೇವಲ ಕರ್ನಾಟಕದವನು ಅಂತ ನನಗೆ ಅನ್ನಿಸಿಲ್ಲ. ಅಲ್ಲದೇ ಕೇವಲ ಬದುಕಿರೋನು ಮಾತ್ರವಲ್ಲ, ಸತ್ತೋನು ಕೂಡ ನನ್ನ ಕಾವ್ಯವನ್ನ ಓದ್ತಿದ್ದಾನೆ ಅಂತ ನನಗೆ ಭಾಸವಾಗುತ್ತೆ. ಇನ್ಮುಂದೆ ಹುಟ್ಟಲಿರುವ ಮಗು ಕೂಡ ನನ್ನನ್ನ ಓದ್ತದೆ ಅಂತ ನನಗೆ ದುಗುಡ, ಖುಷಿಯಾಗುತ್ತೆ. ನಾನು ಈ ಪರಿಪ್ರೇಕ್ಷ್ಯದಲ್ಲಿ ವಿಚಾರ ಮಾಡ್ತೇನೆ. ಹೊಸ ದಿಕ್ಕಿನ ಪಯಣ ನನಗೆ ಇಷ್ಟ. ನಾನೇ ನಡೆದ ದಾರಿಗಳನ್ನು ಬಿಟ್ಟು ಚಲಿಸುವುದು ನನಗಿಷ್ಟ. ಎಷ್ಟೋ ಸಲ ಅದರಲ್ಲಿ ಪ್ರಸಿದ್ಧಿ ಇದ್ದರೂ ಅದನ್ನು ತೊರೆದು ಸಾಗಿರುವೆ. ಹಿಂದೆ ಮಾಡಿದ್ದಕ್ಕಿಂತ ವಿಭಿನ್ನವಾಗಿ ಬರೆಯುವ ಅವಕಾಶವಿದೆಯೆ ಎಂದು ಹಗಲು ರಾತ್ರಿ ಚಡಪಡಿಸ್ತೇನೆ. ನಮ್ಮಲ್ಲಿ ಅನೇಕರು ಒಂದು ಸಲ ಸಿಕ್ಕ ಯಶಸ್ಸನ್ನೆ ಬಳಸಿ ಬಳಸಿ ಪುನರಾವರ್ತಿಸ್ತಾರೆ. ಅದು ನನಗೆ ಬೇಕಿಲ್ಲ. ನನಗೆ ಯಶಸ್ಸು ಬೇಕಿಲ್ಲ, ಸಂತೃಪ್ತಿ ಬೇಕು. ಬರವಣಿಗೆಯಿಂದ ಮಾತ್ರ ಸಿಗಬಹುದಾದ ಸಂತೃಪ್ತಿ.

◆ ನಿಮ್ಮ ರಾಜಕೀಯ ನಿಲುವುಗಳು ಏನು ಎಂಬುದನ್ನು ಅನೇಕರು ಆಗಾಗ ಪ್ರಶ್ನಿಸ್ತಿರ್ತಾರೆ... ಈ ಕುರಿತು ನನ್ನ ಪ್ರಶ್ನೆ ಏನಂತಂದ್ರೆ...

(ಸಿಟ್ಟಿನಿಂದ) ಯಾರಯ್ಯಾ ಅವ್ರು. ಅವ್ರು ಏನೇನೊ ಪ್ರಶ್ನಿಸ್ತಾರೆ ಅಂತ ಅದಕ್ಕೆಲ್ಲ ಉತ್ತರ ಹೇಳ್ತಾ ಕೂಡೋಕ್ಕಾಗಲ್ಲ.

◆ ಹಾಗಲ್ಲ ಸರ್... ಒಂದ್ನಿಮಿಷ... ಸಮಾಧಾನ. ಈಗ ಕವಿಯೊಬ್ಬನ/ಳ ರಾಜಕೀಯ ನಿಲುವುಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ಅನೇಕ ದಾರಿಗಳಿರ್ತವೆ. ಕೆಲವರ ನಿಲುವು ಬೇಗ ಗೊತ್ತಾಗುವುದುಂಟು. ಇನ್ನೂ ಕೆಲವರ ರಾಜಕೀಯ ನಿಲುವಿನ ಅಭಿವ್ಯಕ್ತಿ ತುಂಬಾ ಸಂಕೀರ್ಣ. ಹೀಗಾದಾಗ ಕವಿಯ ಅಥವಾ ಕಾವ್ಯದ ರಾಜಕೀಯ ನಿಲುವುಗಳನ್ನು ಅರ್ಥಮಾಡಿಕೊಳ್ಳುವ ಕ್ರಮಗಳು ಯಾವುವು? ಅಥವಾ ಕವಿ ಮತ್ತು ರಾಜಕೀಯ ಪ್ರಜ್ಞೆಯ ನಡುವಿನ ಸಂಬಂಧ ಯಾವ ಬಗೆಯದು? ನಿಮಗೆ ಇಷ್ಟವಿದ್ದರೆ ನಿಮ್ಮ ಬರಹವನ್ನೆ ಕೇಂದ್ರವಾಗಿಟ್ಟುಕೊಂಡು ನೀವು ಪ್ರತಿಕ್ರಿಯಿಸಬಹುದು.

ಒಂದು ಕೃತಿಯ ಕಲಾತ್ಮಕ ಮೌಲ್ಯ ಮತ್ತು ಅದರ ಸಾಮಾಜಿಕ ರಾಜಕೀಯ ಮಹತ್ವ ಬರಹಗಾರರ ಮೇಲುಮೇಲಿನ ಪ್ರತಿಕ್ರಿಯೆಗಳಲ್ಲಿ ಇರುವುದಿಲ್ಲ. ಬಹಳ ಪ್ರಗತಿಪರವಾಗಿ ಮಾತಾಡುವ ಲೇಖಕರ